(SRI M. GOVINDA REDDY.)

Colony? Are any beggars admitted into the colony discharged at any time?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಕೆಲವರು ಬಿಟ್ಟು ಹೋಗುತ್ತಾರೆ. ಇನ್ನು ಮೇಲೆ ತಾವು ಭಿಕ್ಷಾಟನೆ ಮಾಡುವುದಿಲ್ಲವೆಂದು ಹೇಳಿ ಹೋಗುತ್ತಾರೆ. ಇನ್ನು ಕೆಲವು ಸಂದರ್ಭಗಳಲ್ಲಿ ಅವರ ನೆಂಟರು ಬಂದು ಇನ್ನು ಮೇಲೆ ಅವರನ್ನು ಭಿಕ್ಷೆಗೆ ಬಿಡುವುದಿಲ್ಲವೆಂದು ಹೇಳಿ ಕರೆದುಕೊಂಡು ಹೋಗುತ್ತಾರೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಕಾಲೊನಿಯಲ್ಲಿದ್ದ ಭಿಕ್ಷುಕರು ಕೂಡ ತಪ್ಪಿಸಿಕೊಂಡು ಹೋಗಿರುವ ಸಂದರ್ಭಗಳಿವೆಯೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇವೆ.

Sri M. GOVINDA REDDY.—Is the colony maintaining history sheets of these beggars?

The Hon'ble Sri K. T. BHASHYAM.—Yes, we have maintained.

Sri M. GOVINDA REDDY.—Have any been discharged? Are they kept under observation to see whether they lapse into beggary after their discharge?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ನಾವು ಇನ್ನೂ ಅಷ್ಟು ತೀವ್ರವಾದ ಕೆಲಸಕಾರ್ಯಕ್ಕೆ ಹೋಗಿಲ್ಲ. ಈಗ ಒಬ್ಬನು ತಾನು ತಿರುವಣ್ಣಾಮಲೆಗೆ ಹೊರಟು ಹೋಗುತ್ತೇನೆಂದು ಹೇಳಿ ಹೋದರೆ, ನಾವು ಅಲ್ಲಿಯ ಕಲೆಕ್ಟರಿಗೆ ಬರೆದು ಅವನನ್ನು watch ಮಾಡಿ ಎಂದ ತಿಳಿಸುತ್ತಿಲ್ಲ.

Sri M. GOVINDA REDDY.—In order to see that this experiment is successful, is it not desirable that beggars who are discharged, should be kept under observation?

The Hon'ble Sri K. T. BHASHYAM.—Probably it is desirable. But it is beyond our means at present.

Labour Welfare Officers and Labour Investigators.

*Q.—70. **Sri T. HANUMIAH** (Chitaldrug District—Depressed Class)—

Will the Government be pleased to state :—

(*a*) the number of Labour Welfare Officers and Labour Investigators prior to November 1947 with their names, qualifications, caste and pay with grade ;

(*b*) the number of gents and ladies appointed after November 1947 with their names, qualifications, caste and pay with grade ;

(*c*) how many of these are appointed as per rules of the Public Service Commissioner ; the vacancy numbers with dates of advertisement in the *Mysore Gazette* may be furnished against each ?

A.—**The Hon'ble Sri K. T. BHASHYAM** (Minister for Law and Labour).—(*a*) Prior to 1947, there were no posts of Labour Welfare Officers in the Department of Labour.

The following are the Labour Investigators appointed prior to November 1947 :—

Sl. No.	Name	Qualification	Caste	Pay	Grade
	Sriyuths—			Rs.	Rs.
1	H. K. Chandrasekhara ...	B. Sc.	Lingayat	100	100—5—125
2	A. S. Lakshminarayana ...	M.A.	Brahmin	80	80—5—100
3	C. Subba Rao ...	B.A.	Do	60	60—4—80
4	T. Sadasiviah ...	B.A.	Lingayat	100	Fixed
5	C. N. Nanjappa ...	B.A.	Vokkaliga	100	Do
6	B. S. Rama Rao ...	M.A., LL.B.	Brahmin	100	Do
7	H. M. Mahalinganna ...	B.A. (Hons.)	Vokkaliga	100	Do
8	I. Nagappa ...	B.A.	Lingayat	80	Do
9	M. L. Anantharama Rao ...	B.Sc.	Mahratta	80	Do
10	D. R. Nanjiah ...	B.A.	Adikarnataka	80	Do
11	Janab Abdul Ali ...	M.A., LL.B.	Muslim	100	Do
12	Janab Mujeebulla Sheriff ...	B.A.	Do	100	Go
13	Sri G. Padmanabha ...	LL.B.	Pillay	100	Do
14	Sri M. C. Chandrasekharaiya ...	B.A.	Lingayat	60	Do

NOTE.—Sl. Nos. 2, 6 and 10 are new in service in the Department.

(*b*) The following are the gents and ladies appointed after November 1947. (It is presumed that information is required only in respect of Labour Welfare Officers and Investigators)

Sl. No.	Name	Qualifications	Caste	Pay	Grade
	LABOUR WELFARE OFFICERS			Rs.	Rs.
	Sriyuts—				
1	I. Nagappa ...	B.A.	Lingayat	150	150—25/—25
2	B. M. Sivappa ..	B.A	Do	150	Do
3	A. T. Rangaswamiengar	B.A. Course	Brahmin	150	Do
4	Janab Mujeebulla Sheriff ...	B.A.	Muslim	150	Do
5	G. Padmanabha ...	LL.B.	Pillay	150	Do
6	Srimathi Vasantha Krishnaswamy	B.Sc.	Brahmin	150	Do
	INVESTIGATORS.				
	Sriyuts—				
1	B. H. Muniram ...	B.A.	Banajiga	60	60—4—80
2	S. M. Shankare Gowda ...	B.A.	Vokkaliga	60	Do
3	M. Mabadeviah ...	B.A.	Lingayat	60	Do
4	B.M. S.vappa ...	B.Sc	Do	100	Fixed
5	B. M. Shivaramu ...	B.A.	Vokkaliga	80	Fixed
6	M. Shantaraj ...	B.A.	Kunchitiga	80	Fixed
7	Srimathi Vasantha Krishnaswamy	B.Sc.	Brahmin	100	Fixed
8	Janab Khadar Ali Manzoor ...	B.A.	Muslim	80	80—5—100
9	S. R Mallikarjuna ...	B.Sc.	Lingayat	80	Do
10	M.S. Venugopal Naidu ..	B.A.	Naidu	80	Do
11	Janaba Bibijan	M.A.	Muslim	100	100—10—150
12	Janab Mir Ahmed Hussain ...	B. Sc.	Do	100	Do
13	K. B. Sitarama Reddy ..	B. Sc., LL.B.	Vokkaliga	100	Do

(*c*) Labour Welfare Officers appointments are Gazetted. Hence Rules of Public Service Commissioner do not apply to this. Three appointments of Investigators were made according to rules of Public Service Commissioner. They are the following :—

1. Srimathi Vasantha Krishnaswamy, Vacancy No. 1306, advertised in the *Mysore Gazette*, dated 7th April 1949.

2. Sriyuts B. M. Sivaramu and M. Shantaraj, Vacancy Nos. 372 and 373, advertised in the *Mysore Gazette*, dated 12th August 1948.

ಶ್ರೀ ಟಿ. ಹನುಮಯ್ಯನವರು.—ಸ್ವಾಮಿ, 13 ಜನ ಲೇಬರ್ ಇನ್‌ವೆಸ್ಟಿಗೇಟರುಗಳಲ್ಲಿ ಮೂರು ಜನರನ್ನು ಮಾತ್ರ ಪಬ್ಲಿಕ್ ಸರ್ವಿಸ್ ಕಮೀಷನರ ನಿಬಂಧನೆಗಳ ಪ್ರಕಾರ ನೇಮಕ ಮಾಡಲಾಯಿತೆಂದು ತಿಳಿಸಿದೆ, ಉಳಿದವರನ್ನು ಏಕೆ ಆ ರೀತಿ ಮಾಡಲಿಲ್ಲ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂ ರವರು.—ಕೆಲಸ ಖಾಲಿ ಬಿದ್ದ ಕೂಡಲೆ ಕೆಲಸ ನಡೆಯಬೇಕಾಗುತ್ತದೆ. ಲೇಬರ್ ಕಮೀಷನರಿಗೆ ಲೋಕಲ್ ಕ್ಯಾಂಡಿಡೇಟು ಗಳನ್ನು ನೇಮಿಸಿಕೊಳ್ಳಲು ಅಧಿಕಾರವಿತ್ತು, ಅದರಂತೆ ಅವು ಮಾಡಿ ಆಮೇಲೆ ಸರ್ಕಾರಕ್ಕೆ ತಿಳಿಸಿದರು. ಅದಕ್ಕೆ ಸರ್ಕಾರದವರು ಒಪ್ಪಿಗೆ ಕೊಟ್ಟರು.

ಶ್ರೀ ಟಿ. ಹನುಮಯ್ಯನವರು.—ಉಳಿದವರನ್ನೂ ಏಕೆ ನಿಬಂಧನೆಗಳ ಪ್ರಕಾರವೇ ನೇಮಿಸಲಿಲ್ಲ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಉತ್ತರ ಹೇಳಿದ್ದೇನೆ. ತಕ್ಷಣ ಕೆಲಸ ಆಗಬೇಕಾಗಿತ್ತು, ಆದ ಕಾರಣ ಲೋಕಲ್ ಕ್ಯಾಂಡಿಡೇಟ್ಸನ್ನು ಕೆಲಸಕ್ಕೆ ತೆಗೆದು ಕೊಂಡರು. ಹಾಗೆ ತೆಗೆದುಕೊಂಡವರಿಗೆ ಆ ಕೆಲಸದ ಪರಿಶ್ರಮವಿತ್ತು. ಆಮೇಲೆ ಸರ್ಕಾರಕ್ಕೆ ಬರೆದರು, ಸರ್ಕಾರದವರು ಅದನ್ನು ರ್ಯಾಟಿಫೈ ಮಾಡಿದರು.

ಶ್ರೀ ಟಿ. ಹನುಮಯ್ಯನವರು.—ಅವರಿಗೆ ಪ್ರಾರಂಭದ ಸಂಬಳವೆಷ್ಟು ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—60 ರೂಪಾಯಿ ಇದೆ, 80 ರೂಪಾಯಿ ಇದೆ.

ಶ್ರೀ ಟಿ. ಹನುಮಯ್ಯನವರು.— 60 ರೂಪಾಯಿ ಯಾರಿಗೆ ? 80 ರೂಪಾಯಿ ಯಾರಿಗೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅರ್ಹತೆಯ ಮೇರೆ ಗೊತ್ತುಮಾಡುತ್ತಾರೆ.

ಶ್ರೀ ಟಿ. ಹನುಮಯ್ಯನವರು.—ಇಲ್ಲಿ ನೋಡಿದರೆ, ಎಲ್ಲರ ಅರ್ಹತೆಯೂ ಒಂದೇ ಸಮನಾಗಿದೆಯಾದರೂ ಬೇರೆ ಬೇರೆ ಸಂಬಳ ಕೊಟ್ಟಿದ್ದೀರಿ, ಕಾರಣವೇನು ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅವರವರ ದಕ್ಷತೆಯ ಮೇರೆ ಕೊಟ್ಟಿದೆ.

ಶ್ರೀ ಟಿ. ಹನುಮಯ್ಯನವರು.—ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುವಾಗ ಅವರ ದಕ್ಷತೆ ಹೇಗೆ ಗೊತ್ತಾಗುತ್ತದೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅವರಿಗೆ ಪ್ರಶ್ನೆಗಳನ್ನು ಹಾಕಿ ತಿಳಿದುಕೊಳ್ಳುತ್ತೇವೆ.

ಶ್ರೀ ಟಿ. ಹನುಮಯ್ಯನವರು.—ಅದರಿಂದಲೇ ನಿಮಗೆ ಅವರ ದಕ್ಷತೆ ಗೊತ್ತಾಗುತ್ತದೆಯೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದರಿಂದ ಮತ್ತು ಬೇರೆ ಮಾರ್ಗಗಳಿಂದಲೂ ಗೊತ್ತಾಗುತ್ತದೆ.

ಶ್ರೀ ಟಿ. ಹನುಮಯ್ಯನವರು.—ಲೇಬರ್ ಇನ್‌ವೆಸ್ಟಿ ಗೇಟರ್‌ಗಳಲ್ಲಿ ಕೆಲವರಿಗೆ 100 ರೂಪಾಯಿ ಕೊಟ್ಟಿದ್ದೀರಿ, ಕಾರಣವೇನು ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಶ್ರೀ ಶಿವಪ್ಪ ನವರು ಮೊದಲು ಇಲ್ಲೇ ಕೇಸ್‌ವರ್ಕರ್ ಆಗಿದ್ದರು. ಅವರಿಗೆ ಆಗಲೇ 80 ಅಥವ 90 ರೂಪಾಯಿ ಸಂಬಳ ಬರುತ್ತಿತ್ತು. ಆದಕಾರಣ ಅವರಿಗೆ 100 ರೂಪಾಯಿ ಕೊಟ್ಟಿದ್ದಾರೆ. ಶ್ರೀಮತಿ ವಸಂತ ಕೃಷ್ಣಸ್ವಾಮಿ ಯವರು ಮಹಿಳೆಯರಾದ ಕಾರಣ ಅವರಿಗೆ 100 ರೂಪಾಯಿ ಕೊಟ್ಟಿದ್ದಾರೆ.

ಶ್ರೀ ಟಿ. ಹನುಮಯ್ಯನವರು.—ಅರ್ಹತೆಯನ್ನು ಗೊತ್ತು ಮಾಡುವುದು ಸಂಬಂಧದ ಮೇರೆಯೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅಲ್ಲ.

ಶ್ರೀ ಟಿ. ಹನುಮಯ್ಯನವರು.—ದಕ್ಷತೆ ಹೇಗೆ ಗೊತ್ತಾಗುತ್ತದೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಆಗಲೇ ಹೇಳಿದ್ದೇನೆ. The uptake of the person, quickness of intellectual response, ability to work, etc., are all taken into consideration. We give them some work in the beginning and we find out

ಶ್ರೀ ಟಿ. ಹನುಮಯ್ಯನವರು.—ಲೇಬರ್ ಇನ್‌ವೆಸ್ಟಿ ಗೇಟರುಗಳಲ್ಲಿ ಕೆಲವರಿಗೆ 60, ಕೆಲವರಿಗೆ 80, ಕೆಲವರಿಗೆ 100 ರೂಪಾಯಿ—ಹೀಗೆ ಒಂದು ಕೆಲಸಕ್ಕೆ ಬೇರೆ ಬೇರೆ ಸಂಬಳ ಮಾಡಿದರೆ 60 ರೂಪಾಯಿ ಪಡೆಯುವವರಿಗೆ ಅತೃಪ್ತಿಯಾಗುವುದಿಲ್ಲವೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇಂತಿಂಥಾ ಹುದ್ದೆಗೆ ಇಷ್ಟಿಷ್ಟು ಸಂಬಳವೆಂದು ಗೊತ್ತಾಗಿರುತ್ತದೆ. ಯಾವ ಹುದ್ದೆಖಾಲಿ ಬೀಳುತ್ತದೆಯೋ ಅದಕ್ಕೆ ನೇಮಕ ಮಾಡಿದರೆ ಅದರ ಸಂಬಳ ಕೊಡುತ್ತೇವೆ.

ಶ್ರೀ ಟಿ. ಹನುಮಯ್ಯನವರು.—ಒಂದೇ ರೀತಿಯ ಹುದ್ದೆಗೆ ಬೇರೆ ಗ್ರೇಡುಗಳಿರುತ್ತವೆಯೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇರುತ್ತವೆ.

ಶ್ರೀ ಟಿ. ಹನುಮಯ್ಯನವರು.—ಶ್ರೀಮತಿ ವಸಂತ ಕೃಷ್ಣಸ್ವಾಮಿ ಎಂಬುವರನ್ನು 7-4-1949ರಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನರ ನಿಬಂಧನೆ ಮೇರೆಗೆ ತಗೆದು ಕೊಂಡಿದ್ದೀರಿ. ನಂತರ ಒಂದು ವರ್ಷಕ್ಕೇ ಅವರಿಗೆ 150 ರೂಪಾಯಿನಿಂದ 250 ರೂಪಾಯಿ ಗ್ರೇಡ್ ಕೊಟ್ಟಿದ್ದೀರಿ, ಕಾರಣವೇನು ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹೆಚ್ಚಿನ ಅನುಭವ ಪಡೆದ ಒಬ್ಬರು ಲೇಬರ್ ವೆಲ್‌ಫೇರ್ ಆಫೀಸರು ಬೇಕಾಗಿದ್ದರು. ಆ ಸಂದರ್ಭದಲ್ಲಿ ಅವರು ಅಲ್ಲೇ ಇದ್ದರು, ಆ ಹುದ್ದೆಯನ್ನು ಅವರಿಗೆ ಕೊಟ್ಟಿದ್ದಾರೆ.

ಶ್ರೀ ಟಿ. ಹನುಮಯ್ಯನವರು.—ಇನ್ನೊಬ್ಬರನ್ನು ನೇಮಕಮಾಡಿಕೊಳ್ಳಬಹುದಾಗಿತ್ತಲ್ಲ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹಾಗೆ ಬಂದ ಇನ್ನೊಬ್ಬರಿಗೆ ಲೇಬರ್ ಇನ್‌ವೆಸ್ಟಿಗೇಟರ್ ಕೆಲಸಕೊಟ್ಟು, ಇವರನ್ನು ಲೇಬರ್ ವೆಲ್‌ಫೇರ್ ಆಫೀಸರನ್ನಾಗಿ ನೇಮಕ ಮಾಡಲಾಯಿತು.

Sri V. M. MASCARENHAS (Retroceded Area—General).—Were there any Christian applicants for these jobs ?

The Hon'ble Sri K. T. BHASHYAM.—I do not remember, Sir.

Sri H. C. LINGA REDDY (Kolar District—General).—Are these Labour Investigators and Labour Welfare Officers liable to transfer ?

The Hon'ble Sri K. T. BHASHYAM.—Yes.

Sri H. C. LINGA REDDY.—What about the Labour Welfare Officers and Investigators working in the Kolar Gold Fields ? Are these appointments covered by the Labour Department ?

The Hon'ble Sri K. T. BHASHYAM.—Till now they were. Hereafter we have got to consider how many we can post because we have got the Brick Making Company which is under the Government.

Sri H. C. LINGA REDDY.—How many Labour Welfare Officers are working in the Brick Making Factory in the Kolar Gold Fields ?

The Hon'ble Sri K. T. BHASHYAM.—There are no Labour Welfare Officers for the Brick Making Factory.

Sri H. C LINGA REDDY.—Under whose control are these Labour Welfare Officers working at present ?

The Hon'ble Sri K. T. BHASHYAM.—They are working under the Labour Commissioner.

Sri H. C. LINGA REDDY.—Are they liable to transfer ?

The Hon'ble Sri K. T. BHASHYAM.—Yes, they are.

Sri H. C. LINGA REDDY.—Has it come to the notice of the Government recently that because the Labour Welfare Officers in the Kolar Gold Fields are not transferred, there is a lot of discontent ?

The Hon'ble Sri K. T. BHASHYAM.—I do not know about that.

Sri H. C. LINGA REDDY.—Will it be enquired into ?

The Hon'ble Sri K. T. BHASHYAM.—I shall ask about it.

Sri G. A. ACHARYA (Bangalore District—General).—Do you admit, Sir, that the present Labour Welfare Officers have absolutely no experience of their work ?

The Hon'ble Sri K. T. BHASHYAM.—I do not admit it, Sir.

Sri G. A. ACHARYA.—Do you not think that there is special qualification required for these officers ?

The Hon'ble Sri K T. BHASHYAM.— We rely upon their ability, tact, wisdom and knowledge of labour conditions.

Sri G. A. ACHARYA —But not in dealing with human beings ?

The Hon'ble Sri K. T. BHASHYAM.— Certainly, in dealing with human beings and machines also !

Sri M. MADIAH (Mysore District—Depressed Class).—May I now the dates on which they were appointed ?

The Hon'ble Sri K. T. BHASHYAM.— These are the dates on which the persons were appointed :—

LABOUR WELFARE OFFICERS.

1 Sri I. Nagappa	...	30—10—1948
2 Sri B. M Sivappa	...	30—10—1948
3 Sri A. T. Rangaswamiengar	...	5—11—1948
4 Janab Mujeebulla Sheriff	...	26—6—1949
5 Sri G. Padmanabha	...	26—6—1949
6 Srimathi Vasantha Krishnaswamy	...	16—1—1950

INVESTIGATORS.

1 Sri B. H. Muniram	...	9—12—1946
2 Sri S. M. Shankare Gowda	...	2—12—1947
3 Sri M. Mahadeviah	...	15—12—1947
4 Sri B. M. Sivappa	...	6—4—1948
5 Sri B. M. Sivaramu	...	21—10—1948
6 Sri M. Shantaraj	...	7—2—1949
7 Srimathi Vasantha Krishnaswamy	...	14—2—1949
8 Janab Khadar Ali Manzoor	...	7—3—1949
9 Sri S. R. Mallikarjuna	...	9—5—1949
10 Sri M. S. Venugopal Naidu	...	20—6—1949
11 Janaba Bibijan	...	4—7—1949
12 Janab Mir Ahmed Hussain	...	26—7—1949
13 Sri K. B. Sitarama Reddy	...	4—12—1950

ಶ್ರೀ ಎಂ. ಮಾದಯ್ಯನವರು.—ಹಾಗೆ ಈ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುವಾಗ ಕೋಮುವಾರು ಪ್ರಾತಿನಿಧ್ಯಕ್ಕೆ ಅನುಗುಣವಾಗಿ ಒಂದು ಸಾರಿ ಪ್ರಾತಿನಿಧ್ಯ ಪಡೆಯದ ಕೋಮಿಗೆ ಅವಕಾಶ ದೊರಕಿಸಿ ಕೊಟ್ಟ ಬಳಿಕ ಮತ್ತೊಂದು ವೇಳೆ ಹಾಗೆ ನೇಮಕ ಮಾಡಿಕೊಳ್ಳಬೇಕಾದ ಅವಶ್ಯಕತೆ ಬಂದರೆ ಆಗ ಪ್ರಾತಿನಿಧ್ಯ ಪಡೆಯದಿರುವ ಕೋಮುಗಳವರಿಗೇ ಪ್ರಾತಿನಿಧ್ಯ ಕೊಡಲು ಅನುಕೂಲವಾಗುವಂಥ ರೀತಿನೀತಿಗಳನ್ನು ತಾವು ಅನುಸರಿಸಿದ್ದೀರಾ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ರೆಕ್ರೂಟ್ ಮೆಂಟ್ ರೂಲ್ಸ್ ಪ್ರಕಾರ ನೋಡಿ ಮಾಡರಾಗಿದೆ.

Sri M. MADIAH.—What are the rules of recruitment ?

The Hon'ble Sri K. T. BHASHYAM.— The rules of recruitment are published and are known to the Hon'ble Member.

ಶ್ರೀ ಎಂ. ಮಾದಯ್ಯನವರು.—ಈಗ ತಾವು ಉದಾಹರಣೆಗೆ ಇಲ್ಲಿ ಶ್ರೀ ಬಿ. ಎಚ್. ಮುನಿರಾಂ, ಬಣಜಿಗ, ಎಂದು ತಿಳಿಸಿದ್ದೀರಿ. ಹೀಗೆ ಇಂಥಾ ಒಂದು ಕೋಮಿನವರ ಪ್ರಾತಿನಿಧ್ಯ ಪೂರೈಸಿದ ಮೇಲೆ ಹಾಗೆ ಪ್ರಾತಿನಿಧ್ಯ ದೊರಕದೇ ಇರುವ ಕೋಮುಗಳವರ ವಿಚಾರದಲ್ಲಿ ತಾವು ಗಮನಕೊಡುವಿರಾ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ರೆಕ್ರೂಟ್ ಮೆಂಟ್ ರೂಲ್ಸುಗಳಲ್ಲಿ ಯಾವ ಪ್ರಕಾರ ಏರ್ಪಾಡು ಗಳನ್ನು ಮಾಡಬೇಕೆಂದು ಹೇಳರಾಗಿದೆಯೋ ಆ ಪ್ರಕಾರವೇ ಏರ್ಪಾಡು ಮಾಡಿದ್ದೇವೆ.

ಶ್ರೀ ಎಂ. ಮಾದಯ್ಯನವರು.—ಮುಂದಕ್ಕೆ ಈ ಹುದ್ದೆಗಳ ಬಗ್ಗೆ ನೇಮಕ ಮಾಡಿಕೊಳ್ಳುವ ಕಾಲದಲ್ಲಿ ಪ್ರಾತಿನಿಧ್ಯ ಪಡೆಯದಿರುವ ಕೋಮುಗಳವರನ್ನೇ ತಾವು ತೆಗೆದುಕೊಳ್ಳುವಂತೆ ಆಲೋಚನೆ ಮಾಡುವಿರಾ ?

ಮಾನ್ಯ ಶ್ರೀ. ಕೆ. ಟಿ. ಭಾಷ್ಯಂರವರು.—ನಾವು ಒಂದು ವಿಶಾಲ ದೃಷ್ಟಿಯಿಂದ ಬ್ರಾಹ್ಮಣ ವರ್ತು ಬ್ರಾಹ್ಮಣೇತರರೆಂದು ಎರಡು ಪಂಗಡ ಮಾಡಿಕೊಂಡಿದ್ದೇವೆ. ಅದಕ್ಕನುಸಾರವಾಗಿ ಏರ್ಪಾಡುಗಳೆಲ್ಲ ನಡೆಯುತ್ತಿವೆ.

ಶ್ರೀ ಎಂ. ಮಾದಯ್ಯನವರು.—ಈ ಇಇವೆಸ್ಟಿಗೇಟರ್ಸ್ ಮತ್ತು ವೆಲ್‌ಫೇರ್ ಆಫೀಸರುಗಳ ನೇಮಕದ ಬಗ್ಗೆ ಒಂದಾವರ್ತಿ ಪ್ರಾತಿನಿಧ್ಯ ಪಡೆಯದ ಒಂದು ಕೋಮಿಗೆ ಅವಕಾಶ ದೊರಕದ ನಂತರ, ಪ್ರಾತಿನಿಧ್ಯ ಪಡೆಯದ ಮತ್ತೊಂದು ಕೋಮಿಗೇ ಈ ಅವಕಾಶ ಕೊಡುವಂತೆ ತಾವು ಒಂದು ರೀತಿನೀತಿಯನ್ನು ಹಾಕಿಕೊಳ್ಳಲು ಸಾಧ್ಯವಿಲ್ಲವೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ನಾವು ಇಂಥಾದ್ದೇ ಪ್ರಾತಿನಿಧ್ಯ ಪಡೆಯದ ಕೋಮು ಎಂಬುದಾಗಿ ಯಾವುದನ್ನೂ ಖಚಿತ ಮಾಡಲು ಸಾಧ್ಯವಿಲ್ಲ. ಯಾವುದು ಬಂದರೆ ಅದನ್ನು ತೆಗೆದುಕೊಂಡು, ಆ ಕ್ರಮ ಪ್ರಕಾರ ಕೊಡುತ್ತಿದ್ದೇವೆ.

ಶ್ರೀ ಎಂ. ಮಾದಯ್ಯನವರು.—ಕೆಲವು ಕೋಮುಗಳವರು ಈ ಸಂಬಂಧವಾಗಿ ಪ್ರಾತಿನಿಧ್ಯ ಪಡೆದಿದ್ದಾರೆಯೇ—ಸಾಕಷ್ಟು ಪ್ರಾತಿನಿಧ್ಯವನ್ನಾದರೂ ಪಡೆದಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ನೋಡಿಕೊಂಡು, ಪ್ರಾತಿನಿಧ್ಯ ಪಡೆಯದ ಕೋಮುಗಳವರಿಗೆ ನಾವು ಏಕೆ ಅನುಕೂಲಮಾಡಬಾರದು ?

The Hon'ble Sri K.T. BHASHYAM.— Most of them represent communities which are not well represented yet. That is obvious.

ಶ್ರೀ ಎಂ. ಮಾದಯ್ಯನವರು.—ಕೆಲವು ಕೋಮುಗಳವರಿಗೆ ಚೆನ್ನಾಗಿ ಪ್ರಾತಿನಿಧ್ಯ ದೊರಕಿರಬಹುದು. ಮತ್ತೆ ಕೆಲವು ಕೋಮುಗಳವರಿಗೆ ಸಾಕಷ್ಟು ಪ್ರಾತಿನಿಧ್ಯ ದೊರಕದಿರಬಹುದು. ಆದರೆ ಯಾವ ಕೋಮುಗಳವರಿಗೆ ಪ್ರಾತಿನಿಧ್ಯ ದೊರಕದೆ ಇರುತ್ತದೋ ಅಂಥವರಿಗೆ ತಾವು ಶಿಫಾರಸ್ಸು ಮಾಡಬೇಕೆಂದು ನಿಯಮವೇನೂ ಇಲ್ಲವೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಯಾರು ಯೋಗ್ಯರಾಗಿರುತ್ತಾರೋ ಅಂಥವರಿಗೆ ರೆಕ್ರೂಟ್ ಮೆಂಟ್ ರೂಲ್ಸು ಪ್ರಕಾರ ನೌಕರಿ ಕೊಡಲಾಗುತ್ತೆ.

Sri M. MADIAH.—ನಾನು ಹೆಸರುಗಳನ್ನು ಹೇಳಬೇಕಾಗಿಲ್ಲ. ಆದರೆ Let me not mention any particular community. Am I to take it that those communities are not so adequately represented as compared with other commnnities not mentioned in the list ?

The Hon'ble Sri K. T. BHASHYAM.— There may be no applications from the other communities. We cannot go and pull up any unqualified man from a community merely because he belongs to an unrepresented community.

ಶ್ರಿ ಎಂ. ಮಾದಯ್ಯನವರು.—ಒಂದು ಕೋಮು ಪ್ರಾತಿನಿಧ್ಯ ಪಡೆಯದೇ ಇದ್ದು, ಅದಕ್ಕೆ ಅವಕಾಶ ದೊರೆತನಂತರ, ಪ್ರಾತಿನಿಧ್ಯ ಪಡೆಯದೇ ಇರುವ ಕೋಮುಗಳವರಿಗೆ ಒಂದೊಂದು ಸಾರ್ತಿ ಒಂದೊಂದು ಕೋಮಿಗೆ ಅವಕಾಶ ಏಕೆ ಕೊಡಬಾರದು ?

ಅಧ್ಯಕ್ಷರು.—ಯಾರು ಅರ್ಜಿಗಳನ್ನು ಕಳುಹಿಸಿಕೊಡುತ್ತಾರೋ ಅವರಲ್ಲಿ ಅರ್ಹರಾದವರಿಗೆ ಅವಕಾಶಕೊಡುತ್ತಾರೆ.

ಶ್ರೀ ಎಂ. ಮಾದಯ್ಯನವರು.—ಅದಕ್ಕೂ ಒಂದು ರೀತಿ ನೀತಿಯಿಲ್ಲವೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—I have already said it. ರೆಕ್ರೂಟ್‌ಮೆಂಟ್ ರೂಲ್ಸುಗಳಿರುವುದು ಅದಕ್ಕಾಗಿಯೇ ! ಅದರ ಪ್ರಕಾರವೇ ನಾವೀಗ ಕೊಡುತ್ತಿರುವುದು.

Sri M. MADIAH.—May I know what the rules are ?

The Hon'ble Sri K. T. BHASHYAM.—As I already said, the rules are printed and published. I will give a copy to the Hon'ble Member.

Sri M. MADIAH.—In the list it is seen that no member of the Scheduled Castes is appointed. Am I to take it that the Government consider that they are very well represented ?

The Hon'ble Sri K. T. BHASHYAM.—Perhaps no applications came from them.

Sri M. MADIAH.—How many applications were received from the members of the Scheduled Castes on the various dates which the Hon'ble Minister was pleased to give just now ?

The Hon'ble Sri K. T. BHASHYAM.—I want notice.

Sri G A. ACHARYA (Bangalore District-General).—Is it wise to introduce this communal warfare in this labour welfare problem ?

The Hon'ble Sri K. T. BHASHYAM.—That is a matter of opinion.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು-ಜಿಲ್ಲೆ).—ಈ ಹದಿಮೂರು ಜನ ರೀಬ್ಲಾ ವೆಲ್‌ಫೇರ್ ಆಫೀಸರುಗಳನ್ನು ನೇಮಕಮಾಡಿಕೊಳ್ಳತಕ್ಕ ಬಗ್ಗೆ ಸರ್ಕಾರದವರೇ ಈ ಸಂಬಂಧವಾಗಿ ರೂರ್ಸ್ ಆಫ್ ಪಬ್ಲಿಕ್ ಸರ್ವಿಸ್ ಕಮಿಷನ್ ಅನುಸರಿಸಿರುವುದಿಲ್ಲವೆಂದು ತಿಳಿಸಿದ್ದಾರೆ.....

ಅಧ್ಯಕ್ಷರು.—ಅವರೇ ಆ ವಿಷಯವನ್ನು ತಿಳಿಸಿದ್ದಾರೆ.

ಶ್ರೀ ಬಿ ಹುಚ್ಚೇಗೌಡರು.—(ಸಿ) ಪ್ರಶ್ನೆಗೆ ಉತ್ತರವಾಗಿ ಮಹಿಳೆಯರಿಂದ ಅರ್ಜಿಗಳು ಎಷ್ಟು ಬಂದಿದ್ದವೆಂಬುದನ್ನು ಹೇಳುವುದಕ್ಕಾಗುತ್ತದೆಯೇ ?

ಮಾನ್ಯ ಶ್ರೀ ಕೆ. ಟಿ ಭಾಷ್ಯಂರವರು.—ಅದನ್ನು ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—(ಸಿ) ಪ್ರಶ್ನೆಗೆ ಉತ್ತರದಲ್ಲಿ ಒಬ್ಬ ಮಹಿಳಾ ಅಧಿಕಾರಿಗಳ ಹೆಸರಿರುವುದರಿಂದ ಅವರ ಅರ್ಜಿಗಳೂ ಬಂದಿರಲೇ ಬೇಕಲ್ಲವೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಆದರೆ ಹಾಗೆ ಬಂದಿದ್ದ ಇತರ ಅರ್ಜಿದಾರರಿಗೆ ತಕ್ಕಷ್ಟು ವಿದ್ಯಾ ಅರ್ಹತೆಗಳಿದ್ದವೋ ಇಲ್ಲವೋ ಗೊತ್ತಾಗುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಇಲ್ಲಿ ಒದಗಿಸಿರುವ ಉತ್ತರದಲ್ಲೇ ಸರ್ಕಾರದವರು ಒಂದು ಕಡೆ ಈ ನೌಕರಿ ಕೊಡತಕ್ಕ ಬಗ್ಗೆ ಪಬ್ಲಿಕ್‌ಸರ್ವಿಸ್ ಕಮಿಷನ್ ರೂಲ್ಸುಗಳನ್ನು ಅನುಸರಿಸುತ್ತಿಲ್ಲವೆಂದೂ ಮತ್ತೊಂದು ಕಡೆ ರೂಲ್ಸು ಅನುಸರಿಸಲಾಗುತ್ತಿದೆಯೆಂದೂ ಹೇಳಿದ್ದಾರಲ್ಲಾ, ಇದರ ಅರ್ಥವೇನು ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದಕ್ಕೆ ಆಗಲೇ ನಾನು ಉತ್ತರವನ್ನು ಹೇಳಿದ್ದೇನೆ.

ಅಧ್ಯಕ್ಷರು.—ಗೆಜೆಟೆಡ್ ನೌಕರಿಗಳ ಬಗ್ಗೆ ಪಬ್ಲಿಕ್ ಸರ್ವಿಸ್ ಕಮಿಷನ್ ರೂಲ್ಸುಗಳನ್ನು ಅನುಸರಿಸುತ್ತಿಲ್ಲವೆಂದೂ, ನಾನ್‌ಗೆಜೆಟೆಡ್ ನೌಕರಿಗಳ ಬಗ್ಗೆ ಮಾತ್ರ ಅದನ್ನು ಅನುಸರಿಸಲಾಗುತ್ತಿದೆಯೆಂದೂ ಹೇಳಿದ್ದಾರೆ.

ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು-ಜಿಲ್ಲೆ).—ಈ ಹುದ್ದೆಗಳಿಗೆಲ್ಲಾ ಪದವೀಧರರೇ ಬೇಕೆಂದಿದೆಯೋ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹೌದು.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು-ಜಿಲ್ಲೆ).—ಈ ಇನ್‌ವೆಸ್ಟಿಗೇಟರುಗಳು ಮತ್ತು ವೆಲ್‌ಫೇರ್ ಅಧಿಕಾರಿಗಳು ಒಟ್ಟು ಎಷ್ಟು ಜನ ಬೇಕೆಂಬುದನ್ನು ನಿರ್ಧಾರಮಾಡಲಾಗಿದೆಯೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಈಗ ಸದ್ಯಕ್ಕೆ ಇಪ್ಪತ್ತನ್ನು ಮಾತ್ರ ಮಾಡಲಾಗಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಇವರ ಸಂಖ್ಯೆಯನ್ನು ಇನ್ನೂ ಹೆಚ್ಚಿಸಬೇಕೆಂಬ ಆಲೋಚನೆ ಇದೆಯೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇನ್ನೂ ಹೆಚ್ಚಿಸಬೇಕೆಂದಿದೆ. ಆದರೆ ಅದಕ್ಕೆಲ್ಲಾ ದುಡ್ಡಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಆ ಬಗ್ಗೆ ತಾವೇನಾದರೂ ಒಂದು ಪಟ್ಟಿ ಮಾಡಿದ್ದೀರಾ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹೆಚ್ಚು ಸಿಬ್ಬಂದಿ ಬೇಕೆಂಬ ಬಗ್ಗೆ ಒಂದು ಪಟ್ಟಿಯನ್ನು ತಯಾರಿಸಲಾಗಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಇವರುಗಳನ್ನು ಆಯಾಯ ಫ್ಯಾಕ್ಟರಿಯವರೇ ತೆಗೆದುಕೊಳ್ಳುತ್ತಾರೋ ಹೇಗೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಸರ್ಕಾರದ ಇಂಡಸ್ಟ್ರಿಯಲ್ ಇಲಾಖೆಯವರು ಇಂತಿಂಥವರನ್ನು ತೆಗೆದುಕೊಳ್ಳಬೇಕೆಂದು ಆಯಾಯ ಕಾರ್ಖಾನೆಗಳವರಿಗೆ ಹೆಸರುಗಳನ್ನು ಕಳುಹಿಸಿಕೊಡುತ್ತಾರೆ.

ಶ್ರೀ ಎಸ್. ರಂಗರಾಮಯ್ಯನವರು.—ಈ ಅಧಿಕಾರಿಗಳ ಸಂಬಳಸಾರಿಗೆ ಸರ್ಕಾರದವರ ತಲೆಯಮೇಲೆ ಬೀಳದೆ ಆಯಾಯಾ ಕಾರ್ಖಾನೆಗಳ ಮೇಲೆ ಬೀಳುತ್ತದಲ್ಲವೆ ?

ಮಾನ್ಯ ಶ್ರೀ ಕೆ ಟಿ. ಭಾಷ್ಯಂರವರು.—ಹೌದು.

ಶ್ರೀ ಎಸ್. ರಂಗರಾಮಯ್ಯನವರು.—ಎಷ್ಟು ಜನ ಗಳಿದ್ದರೆ ಅಲ್ಲಿಗೆ ಒಬ್ಬರು ವೆಲ್‌ಫೇರ್ ಆಫೀಸರಿರಬೇಕೆಂದಿದೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—300 ಜನರ ಮೇಲಿರತಕ್ಕ ಫ್ಯಾಕ್ಟರಿಗಳಿಗೆಲ್ಲ ಒಬ್ಬೊಬ್ಬ ವೆಲ್‌ಫೇರ್ ಆಫೀಸರಿರಬೇಕೆಂಬುದಾಗಿ ಮಾಡಿರುತ್ತೆ.

ಶ್ರೀ ಎಸ್. ರಂಗರಾಮಯ್ಯನವರು.—ಹಾಗಾದರೆ ನಮ್ಮ ಸಂಸ್ಥಾನದಲ್ಲಿ ಅಂಥಾ ಫ್ಯಾಕ್ಟರಿಗಳು ಎಷ್ಟಿವೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹತ್ತಾರು ಫ್ಯಾಕ್ಟರಿಗಳಿವೆ.

Arrangements to meet the Deficit of food grains in the State during 1951-52.

* *Q.*—**3. Sri M. V. KRISHNAPPA** (Kolar District–General).—Will the Government be pleased to state :—

(*a*) the expected deficit of food-grains in the State during the year 1951–52;

(*b*) the quantity of foodgrains that will be given by the Centre to meet the deficit this year ?

A.—**The Hon'ble Sri T. MARIAPPA** (Home Minister).—

(*a*) 1,42,000 tons.

(*b*) 75,000 tons.

ಶ್ರೀ ಎಂ. ವಿ. ಕೃಷ್ಣಪ್ಪನವರು.—(a) ಪ್ರಶ್ನೆಯಲ್ಲಿ " the expected deficit of food grains in the State during the year 1951–52 " ಎಂದು ಕೇಳಿರುವುದಕ್ಕೆ ಉತ್ತರವಾಗಿ 1,42,000 ಟಿಕ್ ಎಂದು ಹೇಳಿದ್ದೀರಿ ಕೊರತೆ ಬೀಳುವುದನ್ನು ಯಾವ ರೀತಿಯಾಗಿ ಲೆಕ್ಕ ಹಾಕುತ್ತೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಯಾವ ಆಧಾರದ ಮೇಲೆ ಹಂಚುತ್ತೇವೆಯೋ ಅದನ್ನು ಅಂದಾಜನ್ನುಮೇಲೆ ಕಂಡುಹಿಡಿದು ಲೆಕ್ಕಹಾಕುತ್ತೇವೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಸಂಸ್ಥಾನದಲ್ಲಿ ಕೊರತೆಯಾಗಬಹುದಾದ್ದನ್ನು ಲೆಕ್ಕಕ್ಕೆ ತೆಗೆದು ಕೊಂಡು ತಾನೆ ಕೊರತೆಬೀಳುವುದನ್ನು ನಿಗದಿ ಮಾಡುವುದು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನೆಲ್ಲಾ ಗಣನೆಗೆ ತೆಗೆದುಕೊಂಡೇ ಗೊತ್ತುಮಾಡುವುದು.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಕೊರತೆಯಿಂದ ಬೇಕಾದ ಗುರಿಮುಟ್ಟಲು ಸಾಧ್ಯವಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ. ಆ ಗುರಿಯನ್ನು ಮುಟ್ಟಬೇಕೆಂಬುದೇ ಸರ್ಕಾರದ ಉದ್ದೇಶ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಆ ಗುರಿ ಯಾವುದೆಂಬುದು ಗೊತ್ತಾದಮೇಲೆ ತಾನೆ ಕೊರತೆಯನ್ನು ನಿಗದಿಮಾಡುವುದು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗಲ್ಲ. ಮೊದಲು ಪ್ರಿಲಿಮಿನರಿಯಾಗಿಯೂ, ಆ ಮೇಲೆ ಎಷ್ಟು ಬರಬಹುದೆಂಬುದನ್ನೂ ನೋಡಿ ಎಲ್ಲಾ ಬಾಬುಗಳನ್ನೂ ಗಮನಿಸಿ ಕೊರತೆಯನ್ನು ನಿಗದಿಮಾಡುತ್ತೇವೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಸಂಸ್ಥಾನದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಯನ್ನು ಲೆಕ್ಕಕ್ಕೆ ತೆಗೆದು ಕೊಂಡಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಈಚೆಗೆ ಸೆನ್ಸಸ್ ಅಂಕಅಂಶಗಳಿಂದ ಗೊತ್ತಾಗಿದೆ. ಅದರಿಂದ ಸ್ವಲ್ಪ ನಮಗೆ ಷಾಕ್ ಆಗಿದೆ. ಈಗ ಶೇಕಡ 12½ ಯಷ್ಟು ಹೆಚ್ಚಾಗಬಹುದೆಂದು ಅಂದಾಜುಮಾಡಿದೆ.

ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—ಈಗ 1,42,000 ಟಿಕ್ ಕೊರತೆ ಬೀಳಬಹುದೆಂದು ಹೇಳುವಾಗ ರೈತರಿಗೆ ಎಷ್ಟು ಧಾನ್ಯ ಉಳಿಸಬೇಕೆಂದು ಗೊತ್ತು ಮಾಡಿದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನೆಲ್ಲಾ ಹಾರ್ವೆಸ್ಟ್ ಆರ್ಡರಿನಲ್ಲೇ ಹೇಳಿದೆ. ಮೊದಲಿಂದ ಇರುವಹಾಗೆ ರೈತರಿಗೆ 16 ಔನ್ಸ್‌ನಂತೆ ಬಿಟ್ಟಿದೆ.

ಶ್ರೀ ಬಿ. ಚನ್ನಬೈರೇಗೌಡರು.—150 ಸೇರಿನಂತೆ ಅವರಿಗೆ ಬಿಡಬೇಕೆಂದು ಆರ್ಡರಿದೆಯೆಂಬುದನ್ನು ಒಪ್ಪುತ್ತೀರಿ ತಾನೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆರ್ಡರಿನಲ್ಲಿರುವುದನ್ನು ಒಪ್ಪಿಕೊಳ್ಳಬೇಕಾಗಿಲ್ಲ. ಅದು ಇದ್ದೇ ಇದೆ.

ಶ್ರೀ ಬಿ. ಚನ್ನಬೈರೇಗೌಡರು.—ಹಾರ್ವೆಸ್ಟ್ ಆರ್ಡರಿನಲ್ಲಿರುವಂತೆ 150 ಸೇರನ್ನು ಬಿಡುವುದು ಅಸತ್ಯವೆಂದೂ, ಆ ರೀತಿಯಾಗಿ ನಡೆಯುತ್ತಿಲ್ಲವೆಂದೂ ಹೇಳಿದರೆ ಒಪ್ಪುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಸತ್ಯ ಎಂದು ಹೇಳುವುದು ಸರಿಯಿಲ್ಲ. It must be refuted.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—1,42,000 ಟಿಕ್ ಕೊರತೆಯಿದೆಯೆಂದು ಹೇಳಿದೆ. ಇದು ರೇಷಿಕ ಕಡಿಮೆ ಮಾಡಿರುವುದರ ಆಧಾರದ ಮೇಲೆ ಗೊತ್ತು ಮಾಡಿದೆಯೆ ಅಥವಾ ಕಡಮೆ ಮಾಡುವುದಕ್ಕೆ ಮುಂಚೆ ಲೆಕ್ಕ ಹಾಕಲಾಗಿತ್ತೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮೊದಲದ್ದ ಸ್ಕೇಲ್ ಆಧಾರದ ಮೇಲೆ ಅದನ್ನು ನಿಗದಿ ಮಾಡಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ರೇಷಿಕ ಕಡಿಮೆ ಮಾಡಿರುವ ಪ್ರಕಾರ ಎಷ್ಟಾಗುತ್ತದೆ ?

The Hon'ble Sri T. MARIAPPA.—I want notice. But this cut is for a temporary period. Therefore it need not be taken into consideration.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—1943-44 ರಿಂದ ಪ್ರತಿವರ್ಷ ಎಷ್ಟೆಷ್ಟು ಕೊರತೆ ಬಿದ್ದಿದೆ ಎಂಬುದನ್ನು ಹೇಳುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—1943—44 ರಲ್ಲಿ ಹೆಚ್ಚು ಆಹಾರ ಬೆಳೆಯುವ ಯೋಜನೆ ಪ್ರಾರಂಭವಾದಾಗ ಎಷ್ಟು ಕೊರತೆಯಿತ್ತು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—1943 ರ ವಿಚಾರ ಗೊತ್ತಿಲ್ಲ. 1944ರಿಂದ ನೋಟೀಸ್ ಕೊಟ್ಟರೆ ಹೇಳಬಹುದು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಕೊರತೆಯು ದಿನೇ ದಿನೇ ಹೆಚ್ಚುತ್ತಿದೆಯೋ ಅಥವಾ ಕಡಿಮೆಯಾಗುತ್ತಿದೆಯೋ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಕೆಲವು ಸಂದರ್ಭದಲ್ಲಿ ಸೀಜನರ್ ಕಂಡೀಷಿಕ ಮೇಲೆ ಹೋಗುತ್ತದೆ. 1946-47 ರಲ್ಲಿ ಜಾಸ್ತಿಯಾಗಿ ಹೋದ ವರ್ಷ ಕಡಮೆಯಾಗಿತ್ತು. ಹೋದ ವರ್ಷ ಒಂದು ಲಕ್ಷ 68 ಸಾವಿರ ಟಿಲ್ಲರೆ ಟಿಕ್ ಕೊರತೆಯಿತ್ತು. ಈ ವರ್ಷ ಸ್ವಲ್ಪ ಕಡಮೆಯಾಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—1945—46ರಲ್ಲಿ ಅಕ್ಯಿಜಿಷಿಕ ಆಗಿರುವುದು ಸರ್ಕಾರದ ಗಮನದಲ್ಲಿದೆಯೆ ?